ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE 26/3/21

# ಹಾದಿಬೀದೀಲಿ ಮಾತನಾಡಬೇಡಿ

## ಶಾಸಕರಿಗೆ ಸಿಎಂ ಯಡಿಯೂರಪ್ಪ ಖಡಕ್ ಸೂಚನೆ | ಆಡಳಿತಕ್ಕೆ ಚುರುಕು, ಅಭಿವೃದ್ಧಿಗೆ ಒತ್ತು ಭರವಸೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು 26-3-21

ಆಡಳಿತಾತ್ಮಕ, ಅಭಿವೃದ್ಧಿ ವಿಚಾರಗಳು ಏನೇ ಇರಲಿ. ಹಾದಿಬೀದೀಲಿ ಮಾತನಾಡಬೇಡಿ, ಮಾಧ್ಯಮದವರಿಗೆ ಮನಸೋಇಚ್ಛೆ ಹೇಳಿಕೆ ನೀಡಬೇಡಿ ಎಂದು ಶಾಸಕರಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಖಡಕ್ ಸೂಚನೆ ನೀಡಿದ್ದಾರೆ.

ಸಿಎಂ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಸಚಿವರು, ಅಧಿಕಾರಿಗಳನ್ನು ಜತೆಗೆ ಕೂಡಿಸಿಕೊಂಡು ಶಾಸಕರ ಸಭೆ ನಡೆಸಿದ ಸಿಎಂ, ಸುದೀರ್ಘವಾಗಿ ಚರ್ಚಿಸಿದರು. ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಗಳು, ಜಿಲ್ಲೆಯ ಸಮಸ್ಯೆಗೆ ಪರಿಹಾರ ಏನೇ ಇದ್ದರೂ ನೇರ ನನಗೆ ಭೇಟಿಯಾಗಿರಿ. ನನ್ನ ಮನೆ, ಗೃಹ ಕಚೇರಿ ಬಾಗಿಲು ನಿಮಗಾಗಿ ಸದಾ ತೆರೆದಿರುತ್ತದೆ.

> ಅಭಿವೃದ್ಧಿ, ಆಡಳಿತಾತ್ಮಕ ವಿಚಾರವಾಗಿ ಸಚಿವರು, ಅಧಿಕಾರಿಗಳೊಂದಿಗೆ ಶಾಸಕರ ಸಭೆ ನಡೆಸಿ ಚರ್ಚಿಸಿದ್ದು, ಫಲಿತದ ಬಗ್ಗೆ ಶಾಸಕರಿಗೂ ಸಮಾಧಾನವಾಗಿದೆ. ಉಪಚುನಾವಣೆ, ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಯಲ್ಲಿ ಪಕ್ಷ ಮೇಲುಗೈ ಸಾಧಿಸಲು ಶ್ರಮಿಸಬೇಕೆಂದು ಸಲಹೆ ನೀಡಿರುವೆ.
>
> | ಬಿ.ಎಸ್. ಯಡಿಯೂರಪ್ಪ ಸಿಎಂ

ಜನರ ಆಶೋತ್ತರಗಳಿಗೆ ಸ್ಪಂದನೆ, ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದು ಎಲ್ಲರ ಮುಖ್ಯ ಉದ್ದೇಶವಾಗಿದ್ದು, ನಿಮ್ಮ ಅಭಿಪ್ರಾಯಗಳಿಗೆ ಓಗೊಟ್ಟು ತಕ್ಷಣ ಈ ಸಭೆ ಕರೆದಿರುವೆ. ಆಯಾ ಇಲಾಖೆಗಳಿಗೆ ಸಂಬಂಧಿಸಿದ ಅನುದಾನ ಬಿಡುಗಡೆ, ಅಭಿವೃದ್ಧಿ ಕಾಮಗಾರಿಗಳ ಪ್ರಸ್ತಾವನೆಗೆ ಅನುಮೋದನೆ, ತ್ವರಿತ ಅನುಷ್ಠಾನದ ಬಗ್ಗೆ ನಿಮ್ಮ ಕಾಳಜಿ ಅರ್ಥವಾಗುತ್ತದೆ. ಆದರೆ ಇವೆಲ್ಲ ವಿಚಾರಗಳು ನಾಲ್ಕು ಗೋಡೆಗಳ ಮಧ್ಯೆ ಪರಾಮರ್ಶೆಯಾದರೆ ಸರ್ಕಾರ, ಪಕ್ಷಕ್ಕೆ ಮುಜುಗರ ಉಂಟಾಗುವುದು ತಪ್ಪುತ್ತದೆ ಎಂದು ಕಿವಿಮಾತು ಹೇಳಿದ್ದಾರೆ.

**ಕಾಲಮಿತಿ ನಿಗದಿ:** ಪ್ರತಿಯೊಬ್ಬ ಶಾಸಕರ ಅಭಿವೃದ್ಧಿ ಪ್ರಸ್ತಾವನೆಗಳು, ಮಂಜೂರು ಬಳಿಕ ಸಂಬಂಧಿಸಿದ ಕಡತವು ಯಾವ ಹಂತದಲ್ಲಿದೆ, ಅನುದಾನ ಬಿಡುಗಡೆ ಕುರಿತು ಚರ್ಚಿಸಿ, ಆಯಾ ಇಲಾಖೆ ಅಧಿಕಾರಿಗಳಿಂದ ಮಾಹಿತಿಯನ್ನು ಬಿಎಸ್‌ವೈ ಒದಗಿಸಿದರು. ಆರ್ಥಿಕ ಪರಿಸ್ಥಿತಿ ಕ್ರಮೇಣ ಚೇತರಿಕೆ ಹಾದಿಯಲ್ಲಿದೆ. ಹಂತ ಹಂತವಾಗಿ ಮಂಜೂರು ಮಾಡಿದ ಅನುದಾನ ಬಿಡುಗಡೆಯಾಗಲಿದ್ದು, ಚಿಂತೆ ಬೇಡವೆಂದು ಶಾಸಕರಿಗೆ ಅಭಯ ನೀಡಿದ್ದಾರೆ.

ಬೇಸಿಗೆ ಕಾಲಿಟ್ಟಿರುವ ಕಾರಣ ಕುಡಿಯುವ ನೀರು ಪೂರೈಕೆಗೆ ಮೊದಲ ಆದ್ಯತೆ ನೀಡಬೇಕು. ಅರ್ಧಕ್ಕೆ ನಿಂತ ಪ್ರಮುಖ ಕಾಮಗಾರಿಗಳನ್ನು ಚುರುಕುಗೊಳಿಸಿ ಪೂರ್ಣಗೊಳಿಸುವುದಕ್ಕೆ ಒತ್ತು ನೀಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.



ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ಸಿಎಂ ಬಿ.ಎಸ್.ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಸಚಿವರು, ಶಾಸಕರು, ಅಧಿಕಾರಿಗಳ ಸಭೆ ಗುರುವಾರ ನಡೆಯಿತು. ಡಿಸಿಎಂ ಗೋವಿಂದ ಕಾರಜೋಳ, ಸಚಿವರಾದ ಬಸವರಾಜ ಬೊಮ್ಮಾಯಿ, ಬಿ.ಶ್ರೀರಾಮುಲು, ಮುರುಗೇಶ್ ನಿರಾಣಿ, ಶಾಸಕರು, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಇನ್ನಿತರರಿದ್ದರು.



ಸಿಎಂ ಕಚೇರಿ ಅನುಮೋದಿಸಿ ಕಳುಹಿಸಿದ ಕಡತಗಳನ್ನು ಕೆಲವು ಸಚಿವರು ತಡೆ ಹಿಡಿದಿದ್ದು, ಕೇಳಲು ಹೋದರೆ 'ನಿಮ್ಮ ಮುಖ್ಯಮಂತ್ರಿ' ಜತೆಗೆ ಮಾತನಾಡಿ ಎನ್ನುತ್ತಾರೆ ಎಂದು ಕೆಲವು ಶಾಸಕರು ಇದೇ ವೇಳೆ ದೂರಿದ್ದಾರೆ. ಯಾವೊಬ್ಬ ಸಚಿವ ಸಂಪುಟ ಸಹೋದ್ಯೋಗಿಯನ್ನು ಬಿಟ್ಟುಕೊಡದ ಬಿಎಸ್‌ವೈ, ಬಹುಶಃ ಭಾವೋದ್ವೇಗದ ಸನ್ನಿವೇಶದಲ್ಲಿ ಇಂತಹ ಪ್ರತಿಕ್ರಿಯೆ ಬಂದಿರಬಹುದು ಸಂಬಂಧಿಸಿದ ಸಚಿವರಿಗೆ ವಿಚಾರಿಸಿ ಸಮಸ್ಯೆ ಬಗೆಹರಿಸುವೆ ಎಂದು ಹೇಳಿದ್ದಾರೆ. ಎಲ್ಲ ಅಧಿಕಾರಿಗಳಿಗೆ ಕಾಲಮಿತಿ ನಿಗದಿಪಡಿಸಿ, ಆಡಳಿತಕ್ಕೆ ಚುರುಕು ಮುಟ್ಟಿಸಿವೆ. ಈ ಬಗ್ಗೆ ಕಳವಳ ಬೇಡವೆಂದು ನಯವಾಗಿಯೇ ಒಪ್ಪಿಸಿದ್ದಾರೆ.

> ಕೋರಿಕೆಯಂತೆ ಸಚಿವರು ಹಾಗೂ ಅಧಿಕಾರಿಗಳ ಸಭೆ ಕರೆದ ಸಿಎಂ ವಿಸ್ತೃತವಾಗಿ ಚರ್ಚಿಸಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಿ ಶಾಸಕರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕು ಎಂಬ ಸೂಚನೆ ನೀಡಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿ ಬಿಎಸ್‌ವೈಗೆ ಶಾಸಕರೆಲ್ಲರ ಪರವಾಗಿ ಅಭಿನಂದನೆ ಸಲ್ಲಿಸುವೆ.
>
> | ಎಂ.ಪಿ. ರೇಣುಕಾಚಾರ್ಯ ಸಿಎಂ ರಾಜಕೀಯ ಕಾರ್ಯದರ್ಶಿ

### ಯತ್ನಾಳ್ ವಿರುದ್ಧ ಸಹಿ ಸಂಗ್ರಹ

ಮುಖ್ಯಮಂತ್ರಿ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಸಭೆಯಲ್ಲಿ ಕ್ರಿಯಾಶೀಲ ಆಡಳಿತ, ಅಭಿವೃದ್ಧಿಗೆ ವೇಗ ನೀಡಬೇಕೆಂಬ ಮಂತ್ರ ಮೇಲ್ನೋಟಕ್ಕೆ ಜಪಿಸಿದರೂ ಸಿಎಂ ಪರ ಬಲಪ್ರದರ್ಶನ ಹಾಗೂ ಒಗ್ಗಟ್ಟಿನ ಕಾರ್ಯತಂತ್ರ ಈ ಸಭೆಯ ತಿರುಳಾಗಿತ್ತು ಎಂದು ಮೂಲಗಳು ತಿಳಿಸಿವೆ. ಸರ್ಕಾರ ಮತ್ತು ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆ, ಕೆಲವು ನಾಯಕರ ನಡವಳಿಕೆ ಅದರಲ್ಲೂ ಶಾಸಕ ಬಸನಗೌಡ ಯತ್ನಾಳ್ ತುತ್ತೂರಿ ಹಿಡಿದು ನಿಂತಿರುವ ಬಗ್ಗೆ ಸಭೆಯಲ್ಲಿ ಕಳವಳ ವ್ಯಕ್ತವಾಗಿದೆ. ಯಡಿಯೂರಪ್ಪ, ಪುತ್ರ ಬಿ.ವೈ.ವಿಜಯೇಂದ್ರ ಹಾಗೂ ಕುಟುಂಬ ಸದಸ್ಯರ ವಿರುದ್ಧ ಯತ್ನಾಳ್ ಪದೇಪದೆ ಹೇಳಿಕೆ ನೀಡುತ್ತಿರುವುದನ್ನು ಶಾಸಕರು ಒಕ್ಕೊರಲಿನಿಂದ ಖಂಡಿಸಿದ್ದಾರೆ. ನಿಮ್ಮೊಂದಿಗೆ ನಾವಿದ್ದೇವೆ. ಯತ್ನಾಳ್‌ರನ್ನು ಪಕ್ಷದಿಂದ ವಜಾ ಮಾಡಲು ಒತ್ತಾಯಿಸಿ ಮನವಿಪತ್ರ ಸಿದ್ಧಪಡಿಸಿದ್ದೇವೆ ಎಂದು ನಿವೇದಿಸಿದ್ದಾರೆ.

**ದೆಹಲಿಗೆ ತೆರಳಿ ವರಿಷ್ಠರ ಭೇಟಿಗೆ ನಿರ್ಧಾರ:** ಯತ್ನಾಳ್‌ರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂಬ ಶಾಸಕರ ಸಹಿಯುಳ್ಳ 2 ಪುಟಗಳ ಮನವಿಪತ್ರ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹೆಸರಿನಲ್ಲಿ ತಯಾರಾಗಿದೆ. ಮನವಿ ಪ್ರತಿಯನ್ನು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಗೆ ಸಲ್ಲಿಸಲು ಶಾಸಕರು ನಿರ್ಧರಿಸಿದ್ದಾರೆ. ಪಂಚ ರಾಜ್ಯಗಳ ಚುನಾವಣೆ ಬಳಿಕ ದೆಹಲಿಗೆ 3-4 ಶಾಸಕರ ತಂಡವೊಂದು ತೆರಳಿ, ವಸ್ತುಸ್ಥಿತಿ ತಿಳಿಸಿ, ಯತ್ನಾಳ್ ವಜಾ ಮಾಡಬೇಕೆಂಬ ಬೇಡಿಕೆ ಮುಂದಿಡಲಿದ್ದಾರೆ ಎನ್ನಲಾಗಿದೆ.